**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು**

ದಿನಾಂಕಃ 07ನೇ ಏಪ್ರಿಲ್ ತಿಂಗಳು 2026ರಂದು

**ಸಿಸಿ ನಂ.145/2023**

**ಫಿರ್ಯಾದುದಾರರುಃ** ಸರಕಾರದ ಪರವಾಗಿ (ಕಾರ್ಮಿಕ ನಿರೀಕ್ಷಕರು),
ಹುಣಸೂರು ವೃತ್ತ, ಹುಣಸೂರು.

– ವಿರುದ್ಧ –

**ಆರೋಪಿಃ** ಶ್ರೀ ಆರ್.ಪ್ರಕಾಶ್, ಬಿನ್ ರಾಮಚಂದ್ರರಾವ್
67 ವರ್ಷ,
ಮಾಲೀಕರು ಮೆ.ಪ್ರಕಾಶ್ ತ್ರೆಡ್ ಸೆಂಟರ್,
ಜೆಎಲ್ ಬಿ ರಸ್ತೆ, ಹುಣಸೂರು.

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 251 ರ ಅಡಿಯಲ್ಲಿ ಆರೋಪಣಾ ಸಾರಾಂಶ**

ಫಿರ್ಯಾದುದಾರರಾದ ಟಿ,.ವಿ.ಲಕ್ಷ್ಮೀಶ ಹುಣಸೂರು ಕಾರ್ಮಿಕ ವೃತ್ತ ಇದರ ಕಾರ್ಮಿಕ ನಿರೀಕ್ಷಕರು ದಿನಾಂಕಃ 30.08.2022ರಂದು ಮಧ್ಯಾಹ್ನದ ಸಮಯದಲ್ಲಿ ಮೆ.ಪ್ರಕಾಶ್ ತ್ರೆಡ್ ಸೆಂಟರ್ ಸಂಸ್ಥೆಯ ಮಾಲೀಕರಾದ ಆರೋಪಿಯಾದ ನಿಮ್ಮ ಸಂಸ್ಥೆಗೆ ಭೇಟಿ ನೀಡಿ ವಿವಿಧ ಕಾರ್ಮಿಕ ಕಾಯ್ದೆಗಳಡಿ ನಿರೀಕ್ಷಣೆ ನಡೆಸಿದ್ದು, ನಿರೀಕ್ಷಣೆ ನಡೆಸುವ ಸಮಯದಲ್ಲಿ ನೀವು ಅಂಗಡಿ ನೋಂದಣಿ ಪತ್ರವನ್ನು ನವೀಕರಿಸಿರುವುದಿಲ್ಲ ಎಂದು ಕಂಡು ಬಂದಿದ್ದು ನೀವು ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ ಕಲಂ.4 ಸಹಕಲಂ (4) ಅನ್ನು ಉಲ್ಲಂಘನೆ ಮಾಡಿ ಸದರಿ ಕಾಯ್ದೆಯ ಕಲಂ.30ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

| | |
|---|---|
| ಪ್ರಶ್ನೆಃ1 | ನಿಮಗೆ ತಿಳಿದಿರುವ ಭಾಷೆಯಲ್ಲಿ ಓದಿ ವಿವರಿಸಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ? |
| ಉತ್ತರಃ | ತಿಳಿಯಿತು |

| | |
|---|---|
| ಪ್ರಶ್ನೆಃ 2 | ನೀವು ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಬಯಸುವಿರಾ? |
| ಉತ್ತರಃ | ತಪ್ಪು ಒಪ್ಪಿಕೊಳ್ಳುತ್ತೇನೆ |

ಮೇಲ್ಕಾಣಿಸಿದ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

Sd/-

ANITHA Digitally signed by ANITHA Date: 2026.04.07 18:03:53 +0530

**(ಅನಿತ)**

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಪ್ರ.ದ.ನ್ಯಾದಂ., ಹುಣಸೂರು .

ಆರೋಪಿಯ ಸಹಿಃ